# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 166 (259)
2) ಸದಸ್ಯರ ಹೆಸರು : ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
3) ಉತ್ತರಿಸುವ ದಿನಾಂಕ : 06.07.2023
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 2022 ರಿಂದ 2023 ರವರೆಗೆ ಸಂಗ್ರಹಿಸಿದ ಒಟ್ಟು ತೆರಿಗೆ ಎಷ್ಟು ಹಾಗೂ ಈ ಸಾಲಿನಲ್ಲಿ ಕೈಗೊಂಡ ಒಟ್ಟು ತನಿಖೆಗಳ ಸಂಖ್ಯೆ ಎಷ್ಟು ಮತ್ತು ಸರ್ಕಾರಕ್ಕೆ ಈ ತನಿಖೆಯಿಂದ ಎಷ್ಟು ದಂಡ ವಸೂಲಾತಿ ಮಾಡಲಾಗಿದೆ: (ಜಿಲ್ಲಾವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು) | ಅನುಬಂಧ – 1 & 2 ರಲ್ಲಿ ಮಾಹಿತಿಯನ್ನು ಲಗತ್ತಿಸಿದೆ. |
| ಆ) | ವಾಣಿಜ್ಯ ತೆರಿಗೆ ಇಲಾಖೆಯ ತೆರಿಗೆ ಸಂಗ್ರಹಣೆಯಲ್ಲಿ ಬೆಂಗಳೂರು ನಗರದ ಕೊಡುಗೆ ಹೆಚ್ಚಾಗಿದ್ದು, ಬೆಂಗಳೂರಿನಲ್ಲಿರುವ ಜಾರಿ ಮತ್ತು ಜಾಗೃತಿ ವಿಭಾಗಗಳ ಪ್ರಗತಿ ಯಾವ ರೀತಿ ಆಗಿದೆ: ಈ ಪ್ರಗತಿ ಕಡಿಮೆಯಾಗಿದ್ದರೆ ಇದಕ್ಕೆ ಕಾರಣಗಳೇನು; (ಪೂರ್ಣ ಅಂಕಿ-ಅಂಶಗಳ ಮಾಹಿತಿಯನ್ನು ನೀಡುವುದು) | ಬೆಂಗಳೂರು ನಗರದ ಅಪರ ಆಯುಕ್ತರು, ದಕ್ಷಿಣ ವಲಯ, ವಿಭಾಗದಲ್ಲಿ 2022-23ನೇ ಸಾಲಿನಲ್ಲಿ ಒಟ್ಟು 3000 ತಪಾಸಣೆಗಳನ್ನು ಕೈಗೊಂಡಿದ್ದು, ಇದರಿಂದ ಒಟ್ಟು ತೆರಿಗೆ, ಬಡ್ಡಿ, ದಂಡ ಸೇರಿ ರೂ.658 ಕೋಟಿ ಸಂಗ್ರಹಿಸಲಾಗಿದೆ. ಹಾಗೂ ಜಾಗೃತಿ ವಿಭಾಗದಲ್ಲಿ 1323 ತಪಾಸಣೆಗಳನ್ನು ಕೈಗೊಂಡಿದ್ದು, ರೂ.78 ಕೋಟಿ ಸಂಗ್ರಹಿಸಲಾಗಿದೆ, ಇನ್ನು ಹೆಚ್ಚು ತಪಾಸಣೆಗಳನ್ನು ಮುಂಬರುವ ದಿನಗಳಲ್ಲಿ ಕೈಗೊಳ್ಳಲಾಗುವುದು. |
| ಇ) | ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಳೆದ 5 ವರ್ಷಗಳಲ್ಲಿ ಎಷ್ಟು ಜನ ಆಯುಕ್ತರನ್ನು ಬದಲಾವಣೆ ಮಾಡಲಾಗಿದೆ: ಈ ಇಲಾಖೆಯಲ್ಲಿ ಪದೇ ಪದೇ ಮುಖ್ಯಸ್ಥರನ್ನು ಬದಲಾವಣೆ ಮಾಡುವುದರಿಂದ ಮತ್ತು ಅನುಭವ ಇರುವ ಹಿರಿಯ ಐ. ಎ. ಎಸ್. ಅಧಿಕಾರಿಗಳನ್ನು ನೇಮಕ ಮಾಡದೆ ಇರುವುದರಿಂದ ಈ ಇಲಾಖೆಯಲ್ಲಿ ಉತ್ತಮ ಕೆಲಸಗಳು ಹಾಗೂ ತೆರಿಗೆ ಸಂಗ್ರಹಣೆ ಮೇಲೆ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು? | ದಿನಾಂಕ:12.10.2017 ರಿಂದ 02.07.2021 ರವರೆಗೆ ಶ್ರೀ ಎಂ.ಎಸ್. ಶ್ರೀಕರ್ ಹಾಗೂ ದಿನಾಂಕ:02.07.2021 ರಿಂದ ಇಲ್ಲಿಯವರೆಗೆ ಶ್ರೀಮತಿ ಸಿ. ಶಿಖಾ ರವರು ವಾಣಿಜ್ಯ ತೆರಿಗೆಗಳ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ಇಲಾಖೆಯಲ್ಲಿ ಪದೇ ಪದೇ ಇಲಾಖಾ ಮುಖ್ಯಸ್ಥರನ್ನು ಬದಲಾವಣೆ ಮಾಡಿರುವುದಿಲ್ಲ. ಕಳೆದ 5 ವರ್ಷಗಳಲ್ಲಿ ಕೇವಲ ಒಂದು ಬಾರಿ ಮಾತ್ರ ಆಯುಕ್ತರನ್ನು ಬದಲಾವಣೆ ಮಾಡಲಾಗಿದೆ ಹಾಗೂ ಪರಿಣಿತ ಹಿರಿಯ ಐ.ಎ.ಎಸ್. ಅಧಿಕಾರಿಯನ್ನೇ ವಾಣಿಜ್ಯ ತೆರಿಗೆ ಆಯುಕ್ತರನ್ನಾಗಿ ನೇಮಿಸಲಾಗುತ್ತಿದೆ. |

ಸಂಖ್ಯೆ: ಆಇ 37 ಸಿಎಸ್ಎಲ್ 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ -1

| 2022-23 ನೇ ಸಾಲಿನ ವಿಭಾಗವಾರು ತೆರಿಗೆ ಸಂಗ್ರಹಣೆ (ರೂ. ಕೋಟಿಗಳಲ್ಲಿ) | | |
|---|---|---|
| ಕ್ರ.ಸಂ | ವಿಭಾಗದಹೆಸರು | 2022-23 ತೆರಿಗೆಸಂಗ್ರಹಣೆ |
| 1 | ವಿ.ಸ.&ಸೇ.ತೆ.ಕ-1, ಬೆಂಗಳೂರು | 16197 |
| 2 | ವಿ.ಸ.&ಸೇ.ತೆ.ಕ-2, ಬೆಂಗಳೂರು | 4132 |
| 3 | ವಿ.ಸ.&ಸೇ.ತೆ.ಕ-3, ಬೆಂಗಳೂರು | 14919 |
| 4 | ವಿ.ಸ.&ಸೇ.ತೆ.ಕ-4, ಬೆಂಗಳೂರು | 8607 |
| 5 | ವಿ.ಸ.&ಸೇ.ತೆ.ಕ-5, ಬೆಂಗಳೂರು | 14351 |
| 6 | ವಿ.ಸ.&ಸೇ.ತೆ.ಕ-6, ಬೆಂಗಳೂರು | 4180 |
| 7 | ವಿ.ಸ.&ಸೇ.ತೆ.ಕ- ಮೈಸೂರು | 1699 |
| 8 | ವಿ.ಸ.&ಸೇ.ತೆ.ಕ- ಮಲೆನಾಡು | 750 |
| 9 | ವಿ.ಸ.&ಸೇ.ತೆ.ಕ- ಮಂಗಳೂರು | 2706 |
| 10 | ವಿ.ಸ.&ಸೇ.ತೆ.ಕ- ಧಾರವಾಡ | 2472 |
| 11 | ವಿ.ಸ.&ಸೇ.ತೆ.ಕ- ಬೆಳಗಾವಿ | 2051 |
| 12 | ವಿ.ಸ.&ಸೇ.ತೆ.ಕ- ದಾವಣಗೆರೆ | 2530 |
| 13 | ವಿ.ಸ.&ಸೇ.ತೆ.ಕ- ಕಲಬುರಗಿ | 1675 |
| 14 | ಹೆಚ್ಚುವರಿ ಐ.ಜಿ.ಎಸ್.ಟಿ. ಸೆಟ್ಲ್‌ಮೆಂಟ್ | 4668 |
| 15 | ಕಿರಿಯಕಾರ್ಯ್ದವಿಭಾಗ, ಬೆಂಗಳೂರು | 1201 |
| 16 | ಜಿಎಸ್‌ಟಿನಷ್ಟಪರಿಹಾರ | 20288 |
| | ಒಟ್ಟು | 102426 |

ಅನುಬಂಧ-2

## 2022-23ನೇ ಸಾಲಿನ ಜಾರಿ ವಿಭಾಗ ಮತ್ತು ಚಲಿಸುವ ದಳ (ಜಾಗೃತಿ) ವಿಭಾಗದಲ್ಲಿ ಕೈಗೊಂಡ

## ತಪಾಸಣೆ ಮತ್ತು ತೆರಿಗೆ ಸಂಗ್ರಹಣೆಯ ವಿವರಗಳು

(ರೂ. ಕೋಟಿಗಳಲ್ಲಿ)

| | | ಜಾರಿವಿಭಾಗ | | | | | ಚಲಿಸುವ ದಳ (ಜಾಗೃತಿ) | |
|---|---|---|---|---|---|---|---|---|
| ಕ್ರ. ಸಂ | ವಿಭಾಗದ ಹೆಸರು | ಕೈಗೊಂಡ ವ್ಯಾಪಾರ ಸ್ಥಳಗಳ ತಪಾಸಣೆ | ತೆರಿಗೆ ಸಂಗ್ರಹಣೆ | ಬಡ್ಡಿ ಸಂಗ್ರಹಣೆ | ದಂಡ ಸಂಗ್ರಹಣೆ | ಒಟ್ಟು ಸಂಗ್ರಹಣೆ | ವಾಹನಗಳ ತಪಾಸಣೆ | ತೆರಿಗೆ/ದಂಡ ಸಂಗ್ರಹಣೆ |
| 1 | ವಾ.ತೆ.ಅ.ಆ. (ಜಾರಿ), ದ.ವ. | 3000 | 637.41 | 15.29 | 4.79 | **657.50** | 228362 | **26.40** |
| 2 | ವಾ.ತೆ.ಜಂ.ಆ. (ಜಾಗೃತಿ), ಬೆಂಗಳೂರು | 1323 | 73.99 | 2.19 | 2.30 | **78.48** | 349973 | **36.14** |
| 3 | ವಾ.ತೆ.ಜಂ.ಆ.(ಜಾರಿ), ಬಳ್ಳಾರಿ | 966 | 56.10 | 1.40 | 3.32 | **60.81** | 275030 | **13.56** |
| 4 | ವಾ.ತೆ.ಜಂ.ಆ.(ಜಾರಿ), ಬೆಳಗಾವಿ | 1325 | 74.65 | 3.04 | 2.10 | **79.79** | 564652 | **20.89** |
| 5 | ವಾ.ತೆ.ಜಂ.ಆ.(ಜಾರಿ), ಹುಬ್ಬಳ್ಳಿ | 1395 | 98.83 | 2.27 | 0.84 | **101.94** | 183535 | **12.59** |
| 6 | ವಾ.ತೆ.ಜಂ.ಆ.(ಜಾರಿ),ಕಲಬುರಗಿ | 1038 | 145.46 | 1.86 | 0.86 | **148.18** | 180047 | **13.10** |
| 7 | ವಾ.ತೆ.ಜಂ.ಆ.(ಜಾರಿ), ಮಂಗಳೂರು. | 726 | 41.97 | 4.46 | 1.05 | **47.48** | 132489 | **7.33** |
| 8 | ವಾ.ತೆ.ಜಂ.ಆ.(ಜಾರಿ), ಮೈಸೂರು. | 1106 | 95.12 | 3.17 | 1.24 | **99.53** | 195319 | **4.36** |
| 9 | ವಾ.ತೆ.ಜಂ.ಆ.(ಜಾರಿ), ಶಿವಮೊಗ್ಗ. | 854 | 43.58 | 1.46 | 1.43 | **46.47** | 292901 | **7.69** |
| | ಒಟ್ಟು | **11733** | **1267.11** | **35.14** | **17.92** | **1320.17** | **2402308** | **142.06** |